# ಕರ್ನಾಟಕ ಮಾಹಿತಿ ಹಕ್ಕು (ನಿರಸನ) ಅಧ್ಯಾದೇಶ 2005

## ವಿಷಯಾನುಕ್ರಮಣಿಕೆ

**ಪ್ರಕರಣಗಳು**


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. 2000ದ ಕರ್ನಾಟಕ ಅಧಿನಿಯಮ 28ರ ನಿರಸನ

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**
**ಅಧಿಸೂಚನೆ**
**ನಂ.ಡಿಪಿಎಎಲ್ 62 ಶಾಸನ 2005, ಬೆಂಗಳೂರು, ದಿನಾಂಕ:17ನೆಯ ಅಕ್ಟೋಬರ್, 2005**

ಕರ್ನಾಟಕ ಮಾಹಿತಿ ಹಕ್ಕು (ನಿರಸನ) ಅಧ್ಯಾದೇಶ, 2005ನ್ನು ಭಾರತದ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಜಾರಿಗೆ ತರಲಾಗಿದ್ದು, ಸಾಮಾನ್ಯ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದಲ್ಲಿ 2005ರ ಕರ್ನಾಟಕ ಅಧ್ಯಾದೇಶ ಸಂಖ್ಯೆ–3 ಎಂಬುದಾಗಿ ಇದನ್ನು ಪ್ರಕಟಿಸಲಾಗಿದೆ.

**2005ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3**
**ಕರ್ನಾಟಕ ಮಾಹಿತಿ ಹಕ್ಕು (ನಿರಸನ) ಅಧ್ಯಾದೇಶ, 2005**

(ಭಾರತ ಗಣರಾಜ್ಯದ ಐವತ್ತಾರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಜಾರಿಗೆ ತರಲಾಗಿದೆ ಮತ್ತು 205ರ ಅಕ್ಟೋಬರ್ ಏಳನೆಯ ದಿನದಂದು ಕರ್ನಾಟಕ ರಾಜ್ಯಪತ್ರದ ವಿಶೇಷಾಂಕದಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ, 2000 ಇದನ್ನು ನಿರಸನಗೊಳಿಸುವುದಕ್ಕಾಗಿ ಒಂದು ಅಧ್ಯಾದೇಶ.

ಕನಾರ್ಡಟಕ ರಾಜ್ಯ ರಾಜ್ಯ ವಿಧಾನಮಂಡಲದ ಎರಡೂ ಸದನಗಳು ಅಧವೇಶನದಲ್ಲಿ ಇಲ್ಲದಿರುವುದಿರಂದ ಮತ್ತು ಕೆಳಗೆ ಕಾಣಿಸಿದ ಉದ್ದೇಶಗಳಿಗಾಗಿ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ, 2000 (2000ರ ಕರ್ನಾಟಕ ಅಧಿನಿಯಮ 28) ಇದನ್ನು ನಿರಸನಗೊಳಿಸಲು ತಕ್ಷಣ ಕ್ರಮ ಕೈಗೊಳ್ಳುವುದನ್ನು ಅಗತ್ಯಪಡಿಸುವ ಸನ್ನಿವೇಶಗಳಿವೆ ಎಂಬ ಬಗ್ಗೆ ಕರ್ನಾಟಕ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಭಾರತದ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು ಈ ಕೆಳಕಂಡ ಅಧ್ಯಾದೇಶವನ್ನು ಹೊರಡಿಸುತ್ತಾರೆ. ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧ್ಯಾದೇಶವನ್ನು ಕರ್ನಾಟಕ ಮಾಹಿತಿ ಹಕ್ಕು (ನಿರಸನ) ಅಧ್ಯಾದೇಶ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **2000ದ ಕರ್ನಾಟಕ ಅಧಿನಿಯಮ 28ರ ನಿರಸನ.–** ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ, 2000 (2000ದ ಕರ್ನಾಟಕ ಅಧಿನಿಯಮ, 28)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಆದರೆ, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೆಯ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮದ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯಾವಾಗತಕ್ಕದ್ದು.

**ಟಿ.ಎನ್. ಚತುರ್ವೇದಿ**

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ (ಪ್ರಭಾರ)
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

**ಸಿಬ್ಬಂದಿ, ಸಾರ್ವಜನಿಕ ದೂರುಗಳು ಮತ್ತು ಪಿಂಚಣಿ ಮಂತ್ರಾಲಯ**
**(ಸಿಬ್ಬಂದಿ ಮತ್ತು ತರಬೇತಿ ಇಲಾಖೆ)**
**ಅಧಿಸೂಚನೆ**
**ನವದೆಹಲಿ, 11ನೆಯ ಅಕ್ಟೋಬರ್, 2005**

**ಎಸ್.ಓ. 1483 (2).–** ಮಾಹಿತಿ ಹಕ್ಕು ಅಧಿನಿಯಮ, 2005 (2005ರ 22)ರ 12ನೆಯ ಪ್ರಕರಣದ (1) ಮತ್ತು (2)ನೆಯ ಉಪಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೇಂದ್ರ ಸರ್ಕಾರವು, ಸದರಿ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು, ಮತ್ತು ಅದಕ್ಕೆ ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ಕೇಂದ್ರ ಮಾಹಿತಿ ಆಯೋಗವೆಂದು ಹೆಸರಿಸಲಾಗುವ ನಿಕಾಯವೊಂದನ್ನು ಈ ಮೂಲಕ ರಚಿಸುತ್ತದೆ.

2. ಕೇಂದ್ರ ಮಆಹಿತಿ ಆಯೋಗವು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ:–

| | | |
|---|---|---|
| 1. | ಶ್ರೀ ವಜಾಹತ್ ಹಬೀಬುಲ್ಲಾ | ಮುಖ್ಯ ಮಾಹಿತಿ ಆಯುಕ್ತ |
| 2. | ಶ್ರೀ ಎ.ಎನ್. ತಿವಾರಿ | ಮಾಹಿತಿ ಆಯುಕ್ತ |
| 3. | ಶ್ರೀ ಓ,ಪಿ.ಕೇಜರಿವಾಲ | ಮಾಹಿತಿ ಆಯುಕ್ತ |
| 4. | ಶ್ರೀ ಎಂ.ಎಂ. ಅನ್ಸಾರಿ | ಮಾಹಿತಿ ಆಯುಕ್ತ |
| 5. | ಶ್ರೀಮತಿ ಪದ್ಮಾ ಬಾಲಸುಬ್ರಹ್ಮಣಿಯನ್ | ಮಾಹಿತಿ ಆಯುಕ್ತ |

3. ಮುಖ್ಯ ಮಾಹಿತಿ ಆಯುಕ್ತ ಮತ್ತು ಮಾಹಿತಿ ಆಯುಕ್ತರವರು, ಪದಧಾರಣ ಮಾಡುವ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವರಿಗೆ ಅರವತ್ತೈದು ವರ್ಷ ವಯಸ್ಸು ತುಂಬುವವರೆಗೆ, ಇದರಲ್ಲಿ ಯಾವುದು ಅಲ್ಲಿಯವರೆಗೆ ಹುದ್ದೆಯಲ್ಲಿರತಕ್ಕದ್ದು.

**ಟಿ. ಜಾಕೋಬ್**
ಜಂಟಿ ಕಾರ್ಯದರ್ಶಿ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ**
**ತಿದ್ದೋಲೆ**
**ಸಂಖ್ಯೆ. ಡಿಪಿಎಆರ್ / 77 / ಆರ್‌ಟಿಐ, 2005, ಬೆಂಗಳೂರು ದಿನಾಂಕ 5ನೇ ಸೆಪ್ಟಂಬರ್, 2005**

ದಿನಾಂಕ 30.7.2005ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾದ ಸರ್ಕಾರಿ ಅಧಿಸೂಚನೆ ಸಂಖ್ಯೆ. ಡಿಪಿಎಆರ್ 77 ಆರ್‌ಟಿಐ 2005, ದಿನಾಂಕ 30.7.2005ರಲ್ಲಿ ಮಾಹಿತಿ ಹಕ್ಕು ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ 22)ರ ಮೇರೆಗೆ ಸದರಿ ಅಧಿಸೂಚನೆಯ ಮೊದಲನೇ ಪ್ಯಾರದಲ್ಲಿ ಸೂಚಿಸಿರುವ ಉಪಬಂಧವನ್ನು ದಯವಿಟ್ಟು ಸರಿಪಡಿಸಿಕೊಳ್ಳತಕ್ಕದ್ದು ಮತ್ತು ಅದನ್ನು ಅಧಿಸೂಚನೆಯಲ್ಲಿ ಕಂಡುಬರುವಂತೆ (2)ನೇ ಉಪ ಪ್ರಕರಣದ ಬದಲಾಗಿ ಮಾಹಿತಿ ಹಕ್ಕು ಅಧಿನಿಯಮ, 2005ರ 15ನೇ ಪ್ರಕರಣದ (3)ನೇ ಉಪ ಪ್ರಕರಣವೆಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ಆರ್. ಬಡಿಗೇರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ)

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ ಇಲಾಖೆ**
**ಅಧಿಸೂಚನೆ**
**ಸಂಖ್ಯೆ. ಡಿಪಿಎಆರ್ / 77 / ಆರ್‌ಟಿಐ, 2005, ಬೆಂಗಳೂರು ದಿನಾಂಕ 21.10.2005**

ಮಾಹಿತಿ ಹಕ್ಕು ಅಧಿನಿಯಮ, 2005 (2005ರ ಸಂಖ್ಯೆ 22) ರ 15ನೇ ಪ್ರಕರಣದ (3)ನೇ ಉಪ ಪ್ರಕರಣದಿಂದ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಟಿ.ಎನ್. ಚತುರ್ವೇದಿ, ಕರ್ನಾಟಕ ರಾಜ್ಯಪಾಲ ಆದ ನಾನು ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರನ್ನು ರಾಜ್ಯ ಮಾಹಿತಿ ಆಯುಕ್ತರನ್ನಾಗಿ ಈ ಮೂಲಕ ನೇಮಕ ಮಾಡಿದ್ದೇನೆ.

**ಟಿ.ಎನ್. ಚತುರ್ವೇದಿ,**
**ಕರ್ನಾಟಕ ರಾಜ್ಯಪಾಲರು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ಆರ್. ಬಡಿಗೇರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಜನಸ್ಪಂದನ)

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ ಇಲಾಖೆ**
**ಅಧಿಸೂಚನೆ**
**ಸಂಖ್ಯೆ. ಡಿಪಿಎಆರ್ / 44 / ಆರ್‌ಟಿಐ, 2004, ಬೆಂಗಳೂರು ದಿನಾಂಕ 05.12.2005**

ಮಾಹಿತಿ ಹಕ್ಕು ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ 22)ರ 24(4)ನೇ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಅಧಿನಿಯಮವು ಕರ್ನಾಟಕ ಸರ್ಕಾರದ ಈ ಮುಂದಿನ ಗುಪ್ತವಾರ್ತಾ ಮತ್ತು ಭದ್ರತಾ ಸಂಸ್ಥೆಗಳಿಗೆ ಅನ್ವಯವಾಗತಕ್ಕದ್ದಲ್ಲವೆಂದು ಈ ಮೂಲಕ ಅಧಿಸೂಚಿಸಲಾಗಿದೆ.

1. ಕರ್ನಾಟಕ ರಾಜ್ಯದ ಪೋಲೀಸ್ ಇಲಾಖೆಯ ರಾಜ್ಯ ಗುಪ್ತವಾರ್ತಾ ಸಂಸ್ಥೆ.
2. ರಾಜ್ಯದ ಪೊಲೀಸ್ ಇಲಾಖೆಯ ಆಯುಕ್ತರ ಕಚೇರಿಗಳ ಮತ್ತು ಜಿಲ್ಲಾ ಪೊಲೀಸ್ ಕಚೇರಿಗಳ ವಿಶೇಷ ಶಾಖೆಗಳು.
3. ಪೊಲೀಸ್ ಇಲಾಖೆಯ ಗುಪ್ತಚಾರದಳ (ಸಿ.ಓ.ಡಿ.)

ಆದರೆ ಭ್ರಷ್ಟಾಚಾರ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಆರೋಪಗಳಿಗೆ ಸಂಬಂಧಿಸಿದ ಮಾಹಿತಿಗೆ ಈ ಅಧಿಸೂಚನೆಯ ಮೇರೆಗೆ ವಿನಾಯಿತಿ ನೀಡಿರುವುದಿಲ್ಲ.

ಈ ಅಧಿಸೂಚನೆಯನ್ನು ಅನಧಿಕೃತ ಟಿಪ್ಪಣಿ ಸಂಖ್ಯೆ ಹೆಚ್‌ಡಿ 31 ಸಶಾಶಾ 2003, ದಿನಾಂಕ 5.10.2005ರ ಪ್ರಕಾರ ಗೃಹ ಇಲಾಖೆಯ ಸಹಮತಿಯೊಡನೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ಆರ್. ಬಡಿಗೇರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ)